ಅ) 2002-03ರಲ್ಲಿ 500 ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅನ್ವಯಿಸುವುದಿಲ್ಲ.

ಇ) ಇಲಾಖೆಯ ಆಯವ್ಯಯದ ವಾರ್ಷಿಕ ಅನುದಾನದಲ್ಲಿ ಮಂಜೂರಾಗಿರುವ ಹಣಕಾಸಿನ ಲಭ್ಯತೆಯನ್ನು ಅನುಸರಿಸಿ, ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಮಂಜೂರು ಮಾಡಿ, ಗ್ರಾಮಾಂತರ ವಿದ್ಯಾರ್ಥಿಗಳಿಗೂ ಆದಷ್ಟು ಶೀಘ್ರವಾಗಿ ಅನುಕೂಲ ಮಾಡಿಕೊಡಲಾಗುವುದು.

ಸೇಡಂ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳ ಭರ್ತಿ

1708 (2012) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಜೂರಾಗಿರುವ ವೈದ್ಯಾಧಿಕಾರಿಗಳ ಹುದ್ದೆಗಳು ಎಷ್ಟು ಅವುಗಳಲ್ಲಿ ಸದ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು

ಆ) ಸೇಡಂ ಕಂದಾಯ ಉಪ ವಿಭಾಗ ಕೇಂದ್ರ ರೈಲ್ವೆ ನಿಲ್ದಾಣ ಬೃಹತ್ ಸಿಮೆಂಟ್, ಕಾರ್ಖಾನೆಗಳು ಇರುವ ದೊಡ್ಡ ನಗರವಾಗಿದ್ದು ಇಲ್ಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಕನಿಷ್ಟ ಅರ್ಧಕ್ಕಿಂತ ಕಡಿಮೆ ವೈದ್ಯಾಧಿಕಾರಿಗಳಾಗಲೀ ನರ್ಸುಗಳಾಗಲೀ, ಇತರೆ ಸಿಬ್ಬಂದಿಯಾಗಲೀ ಇಲ್ಲದಿರುವುದರಿಂದ ಜನರಿಗೆ ಚಿಕಿತ್ಸೆಗಾಗಿ ತೊಂದರೆಯುಂಟಾಗಿರುವುದು ನಿಜವಲ್ಲವೇ;

ಇ) ಈಗಲಾದರೂ ಸಹ ಕೂಡಲೇ ವ್ಯವಸ್ಥೆ ಮಾಡಿ ನಾಗರೀಕರ ಚಿಕಿತ್ಸೆಗಾಗಿ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮಂಜೂರಾದ ಹುದ್ದೆ - 6

ಕಾರ್ಯನಿರ್ವಹಿಸುತ್ತಿರುವುದು - 2

ಆ) ಹೌದು

ಇ) ಖಾಲಿ ಇರುವ ತಜ್ಞ ವೈದ್ಯರುಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ, ಗೌರವ ಧನದ ಆಧಾರದ ಮೇಲೆ, ನಿವೃತ್ತ ಸರ್ಕಾರಿ ತಜ್ಞರನ್ನು ಹಾಗೂ ಖಾಸಗಿ ಸಮಾಲೋಚಕರನ್ನು ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಪಿರಿಯಾಪಟ್ಟಣದ ಹೌಸಿಂಗ್ ಬೋರ್ಡ್ ಮನೆಗಳು

1709 (2038) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣದಲ್ಲಿ ಹೌಸಿಂಗ್ ಬೋರ್ಡ್ ವತಿಯಿಂದ ಕಳೆದ 6 ತಿಂಗಳ ಹಿಂದೆ ಮನೆಗಳನ್ನು ನಿರ್ಮಿಸುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಆ ದಿಸೆಯಲ್ಲಿ ಆಗಿರುವ ಪ್ರಗತಿಯ ವಿವರ ಏನು; ಎಷ್ಟು ಅರ್ಜಿಗಳು ಬಂದಿರುತ್ತದೆ;